

ಬಿಸಿಲು
ಬೆಳದಿಂಗಳು

ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ
swamiji@taralabalu.org

# ಗುಡಿಯೊಳಗೆ ಗುಡಿಯೊಡೆಯನಿದ್ದಾನೋ ಇಲ್ಲವೋ!

"ಸಾರ್, ನಮ್ಮೂರ್ ದೇವಸ್ಥಾನ ಅರ್ಧಕ್ಕೇ ನಿಂತಿದೆ. ಪೂರ್ತಿ ಮಾಡೋಕೆ ನೀವು ಸಹಾಯ ಮಾಡಬೇಕು. ನಮ್ಮೂರಿನ ಓಟುಗಳೆಲ್ಲ ನಿಮಗೇ ಬೀಳುವಂತೆ ನೋಡಿಕೊಳ್ಳುತ್ತೇನೆ".

"ನೀನು ಪೇಪರ್ ಓದಿಲ್ವಾ, ಟಿ.ವಿ ನೋಡಿಲ್ವಾ? ಸಿರಿಗೆರೆ ಗುರುಗಳ ಹತ್ತಿರ ಎಲ್ಲ ಅಭ್ಯರ್ಥಿಗಳೂ ಹೋಗಿ ಪ್ರಮಾಣ ಮಾಡಿ ಬಂದಿದ್ದೇವೆ. ಈ ಸಲದ ಚುನಾವಣೆಯಲ್ಲಿ ಯಾವುದೇ ರೀತಿಯಲ್ಲಿ ಹಣ ಹಂಚುವುದಿಲ್ಲ, ಅಕ್ರಮ ಮಾಡುವುದಿಲ್ಲ ಎಂದು. ಹಾಗೆ ಪ್ರಮಾಣ ಮಾಡಿಯೂ ನಾನು ನಿಮ್ಮೂರ ದೇವಸ್ಥಾನಕ್ಕೆ ಹಣ ಕೊಟ್ಟರೆ ತಪ್ಪಾಗೋದಿಲ್ವಾ, ಹೇಳು?"

ಹಣದ ಅರ್ಜಿ ಮುಂದಿಟ್ಟ ಹಳ್ಳಿಯ ಮುಖಂಡನ ಮುಖ ಕಪ್ಪಾಯಿತು. 'ತಪ್ಪಾಯಿತು ಸಾರ್, ಕ್ಷಮಿಸಿ' ಎಂದು ಹೇಳಿ ಚಹಾ ಕುಡಿದು ಹೊರಟು ಹೋದ. ಚಿಕ್ಕಮಗಳೂರು ವಿಧಾನ ಸಭಾ ಕ್ಷೇತ್ರದ ಅಭ್ಯರ್ಥಿಗಳು ಸಿರಿಗೆರೆಯಲ್ಲಿ ನಮ್ಮ ಸಮ್ಮುಖದಲ್ಲಿ ಪ್ರಮಾಣ ಮಾಡಿ ಚಿಕ್ಕಮಗಳೂರಿಗೆ ಮರಳಿದ ಮಾರನೆಯ ದಿನವೇ ಪಕ್ಷವೊಂದರ ಅಭ್ಯರ್ಥಿಯ ಮನೆಗೆ ಹಳ್ಳಿಯ ಮುಖಂಡನೊಬ್ಬ ಹೋದಾಗ ನಡೆದ ಘಟನೆಯಿದು.

ಇನ್ನೊಂದು ಘಟನೆ. ಪಕ್ಷದ ಕಾರ್ಯಕರ್ತನೊಬ್ಬ ಅಭ್ಯರ್ಥಿಯ ಮನೆಗೆ ಧಾವಿಸಿ ಪ್ರತಿ ಬಾರಿಯಂತೆ ಮತದಾರರಿಗೆ ಹಂಚಲು ಹಣ ಕೇಳಿದ. "ಈ ಬಾರಿ ಹಣ ಹೆಂಡ ಏನನ್ನೂ ಹಂಚುವಂತಿಲ್ಲ, ಗುರುಗಳ ಹತ್ತಿರ ಪ್ರಮಾಣ ಮಾಡಿ ಬಂದಿದ್ದೇವೆ" ಎಂಬ ಮಾತಿಗೆ ಕಾರ್ಯಕರ್ತನ ಗಡುಸಾದ ಪ್ರಶ್ನೆ "ಯಾರನ್ನ ಕೇಳಿ ನೀವು ಗುರುಗಳಿಗೆ ಅಡ್ಡಬಿದ್ದು ಪ್ರಮಾಣ ಮಾಡಿದಿರಿ, ಸಾರ್? ಹಣ, ಹೆಂಡ ಹಂಚದಿದ್ದರೆ ನೀವು ಗೆಲ್ತೀರಾ?"

ಮೇಲಿನ ಎರಡೂ ಉದಾಹರಣೆಗಳನ್ನು ವಿಶ್ಲೇಷಿಸಿದಾಗ ಕಂಡುಬರುವ ಸಂಗತಿಯೆಂದರೆ ಜನಸಾಮಾನ್ಯರ ಮನಸ್ಸಿನಲ್ಲಿರುವ ಪಾಪಪ್ರಜ್ಞೆ ಅವರಿಗಿಂತ ಹೆಚ್ಚು ಬುದ್ಧಿವಂತರೆನಿಸಿದ ಕಾರ್ಯಕರ್ತರಲ್ಲಿ ಇಲ್ಲ. ಇನ್ನು ಅಭ್ಯರ್ಥಿಗಳು ವೈಯಕ್ತಿಕವಾಗಿ ಒಳ್ಳೆಯವರಾಗಿರಲು ಬಯಸಿದರೂ ತಮ್ಮ ಕಾರ್ಯಕರ್ತರನ್ನು ನಿಯಂತ್ರಿಸುವ ಆತ್ಮಸ್ಥೈರ್ಯ ಹೊಂದಿಲ್ಲ. ಅದಕ್ಕೆ ಕಾರಣ ಹೇಗಾದರೂ ಮಾಡಿ ಅಧಿಕಾರವನ್ನು ಪಡೆಯಬೇಕೆಂಬ ಹಂಬಲ ಮತ್ತು ತುಡಿತ. ಸೈನಿಕರನ್ನು ತನ್ನ ನಿಯಂತ್ರಣದಲ್ಲಿ ಇಟ್ಟುಕೊಳ್ಳಲಾರದವನು ದಕ್ಷ ಸೇನಾಪತಿಯಾಗಲಾರ. ವೈಯಕ್ತಿಕ ಗೆಲುವಿಗಿಂತ ಚಿಕ್ಕಮಗಳೂರು ಕ್ಷೇತ್ರವನ್ನು ಸ್ವತಂತ್ರ ಭಾರತದ ಭೂಪಟದಲ್ಲಿ ಒಂದು ಆದರ್ಶಕ್ಷೇತ್ರವನ್ನಾಗಿಸುವ ತುಡಿತ ಎಲ್ಲ ಅಭ್ಯರ್ಥಿಗಳಿಗೂ ಇರಬೇಕು. ಒಂದು ಪಕ್ಷ ಚುನಾವಣೆಯಲ್ಲಿ ಸೋಲುಂಟಾದರೆ ಭಾರತದ ಸ್ವಾತಂತ್ರ್ಯಕ್ಕಾಗಿ ನೇಣುಗಂಬವೇರಿದವರ ತ್ಯಾಗದ ಮುಂದೆ ತಮ್ಮ ಸೋಲು ಏನೂ ಅಲ್ಲ ಎಂಬ ವಿವೇಕ ಜಾಗೃತಗೊಳ್ಳಬೇಕು. ಸ್ವಾತಂತ್ರ್ಯ ಹೋರಾಟಗಾರರು ಹೇಗೆ ದೇಶದ ಸ್ವಾತಂತ್ರ್ಯಕ್ಕಾಗಿ ಸಾಯಲು ಸಿದ್ಧರಾದರೋ ಹಾಗೆ ಪ್ರಜಾಪ್ರಭುತ್ವದ ಉನ್ನತ ಮೌಲ್ಯಗಳನ್ನು ಎತ್ತಿಹಿಡಿಯಲು ಚಿಕ್ಕಮಗಳೂರಿನ ಅಭ್ಯರ್ಥಿಗಳು ಸೋಲಲು ಸಿದ್ಧರಾಗಬೇಕು. ಸೋಲಿನಲ್ಲಿ ಗೆಲುವನ್ನು ಕಾಣಬೇಕು. ಒಮ್ಮೆ ಪ್ರಮಾಣ ಮಾಡಿ ಅದಕ್ಕೆ ವಿರುದ್ಧವಾಗಿ ನಡೆದುಕೊಂಡರೆ ಗೆದ್ದರೂ ಸೋತಂತೆ. ತಮ್ಮ ಆತ್ಮಸಾಕ್ಷಿಗೆ ದ್ರೋಹಬಗೆದಂತೆ. ಚುನಾವಣೆಯು ಅಧಿಕಾರ ಲಾಲಸೆಯ ಕುರುಕ್ಷೇತ್ರ ಆಗಬಾರದು. ಪ್ರಜಾಪ್ರಭುತ್ವದ ಮೌಲ್ಯಗಳನ್ನು ಎತ್ತಿಹಿಡಿಯುವ ಧರ್ಮಕ್ಷೇತ್ರ ಆಗಬೇಕು. ಮಹಾಭಾರತದ ದುರ್ಯೋಧನನಿಗೆ ಧರ್ಮವೇನೆಂಬುದು ಗೊತ್ತಿತ್ತು, ಆದರೆ ಅದರಂತೆ ನಡೆಯುವ ಮನಸ್ಸು ಮಾಡಲಿಲ್ಲ (ಜಾನಾಮಿ ಧರ್ಮಂ ನ ಚ ಮೇ ಪ್ರವೃತ್ತಿಃ). ಅಧರ್ಮವೇನೆಂಬುದೂ ಅವನಿಗೆ ಗೊತ್ತಿತ್ತು, ಆದರೆ ಅದನ್ನು ಬಿಡುವ ಮನಸ್ಸು ಮಾಡಲಿಲ್ಲ (ಜಾನಾಮ್ಯಧರ್ಮಂ ನ ಚ ಮೇ ನಿವೃತ್ತಿಃ). ಈ ಹಿನ್ನೆಲೆಯಲ್ಲಿ ಅಂತಃಸಾಕ್ಷಿಯ ಕತ್ತುಹಿಸುಕಿ ವಾಮಮಾರ್ಗದಲ್ಲಿ ನಡೆಯುವುದನ್ನು ಎಲ್ಲರೂ ಕೈಬಿಡಬೇಕು. ಇದೇ 21 ರಂದು ಭಾನುವಾರ ಚಿಕ್ಕಮಗಳೂರಿನಲ್ಲಿ ಏರ್ಪಡಿಸಿರುವ ಸರ್ವಪಕ್ಷಗಳ ಬಹಿರಂಗ ಸಭೆಯಲ್ಲಿ ಅಭ್ಯರ್ಥಿಗಳು ಮತ್ತು ಮತದಾರರು ಅಂತಹ ಸತ್ಯಸಂಕಲ್ಪವನ್ನು ಮಾಡಲಿ. "ಎನಗೂ ಆಣೆ ರಂಗ, ನಿನಗೂ ಆಣೆ, ಎನಗೂ ನಿನಗೂ ಇಬ್ಬರಿಗೂ ಭಕ್ತರಾಣೆ!" ಎಂದು ಪುರಂದರ ದಾಸರು ಹೇಳುವಂತೆ ಮತದಾರಪ್ರಭುಗಳ ಮುಂದೆ ಎಲ್ಲರೂ ದೃಢ ಪ್ರತಿಜ್ಞೆ ಮಾಡಲಿ.

ಆರಂಭದಲ್ಲಿ ಪ್ರಸ್ತಾಪಿಸಿದಂತೆ ದೇವಸ್ಥಾನದ ಜೀರ್ಣೋದ್ಧಾರಕ್ಕೆ ಚುನಾವಣೆಗೆ ನಿಂತವರು ಹಣ ಕೊಡುವುದು ಈಗ ಹೆಚ್ಚು ಹೆಚ್ಚು ರೂಢಿಯಲ್ಲಿದೆ. ವೈಯಕ್ತಿಕವಾಗಿ ಹಣವನ್ನು ಪಡೆದರೆ ತಪ್ಪು. ಆದರೆ ದೇವಸ್ಥಾನ ಕಟ್ಟುವ ಊರಿನ ಕೆಲಸಕ್ಕೆ ಹಣ ಕೇಳಿದರೆ ತಪ್ಪಿಲ್ಲ ಎಂಬ ಭಾವನೆಯೂ ಅನೇಕ ಜನರಲ್ಲಿದೆ. ಮೇಲುನೋಟಕ್ಕೆ ಇದು ಸರಿಯೆನಿಸಲೂಬಹುದು. ಆದರೆ ದೇವಾಲಯಗಳಿರುವುದು ಆತ್ಮಸಾಕ್ಷಾತ್ಕಾರದ ಜಾಗೃತಿಗೆ. ದೈವೀಗುಣಗಳನ್ನು ವ್ಯಕ್ತಿಯಲ್ಲಿ ಪ್ರತಿಷ್ಠಾಪಿಸಲಿಕ್ಕೆ. ಅವು ಇರುವುದೇ ಧರ್ಮಬೋಧನೆಗಾಗಿ. ಜನರಿಗೆ ಧಾರ್ಮಿಕ ಮಾರ್ಗದರ್ಶನವನ್ನು ಮಾಡಿ ಮುಕ್ತಿಮಾರ್ಗದಲ್ಲಿ ನಡೆಸುವುದೇ ಅವುಗಳ ಗುರಿ. ಶ್ರದ್ಧಾಭಕ್ತಿಯುಳ್ಳ ಭಕ್ತರಿಂದ ಚಂದಾ ಎತ್ತಿ ಅವುಗಳನ್ನು ಕಟ್ಟಬೇಕು. ಅದನ್ನು ಬಿಟ್ಟು ಭ್ರಷ್ಟ ರಾಜಕಾರಣಿಗಳಿಗೆ ತಮ್ಮ ಓಟುಗಳನ್ನು ಮಾರಿಕೊಂಡು ಅದರಿಂದ ಬರುವ ಹಣದಿಂದ ಗುಡಿ

ಕಟ್ಟುವುದು ಯಾವ ದೇವರಿಗೆ ಪ್ರೀತಿ! ಭ್ರಷ್ಟ ಹಣದಿಂದ ದೇವಾಲಯದ ಜೀರ್ಣೋದ್ಧಾರ ಮಾಡಿದರೆ ಕಟ್ಟಡದ ಜೀರ್ಣೋದ್ಧಾರವಾಗಬಹುದು. ಆದರೆ ಮೌಲ್ಯಗಳು ಜರಾಜೀರ್ಣವಾಗುತ್ತವೆ. ಸಂಸ್ಕೃತದಲ್ಲಿ ಒಂದು ಸುಭಾಷಿತವಿದೆ:

**"ಅನ್ಯಕ್ಷೇತ್ರೇ ಕೃತಂ ಪಾಪಂ ತೀರ್ಥಕ್ಷೇತ್ರೇ ವಿನಶ್ಯತಿ ।**
**ತೀರ್ಥಕ್ಷೇತ್ರೇ ಕೃತಂ ಪಾಪಂ ವಜ್ರಲೇಪಂ ಭವಿಷ್ಯತಿ ॥"**

ಅಂದರೆ ಬೇರೆಡೆ ಮಾಡಿದ ಪಾಪವು ತೀರ್ಥಕ್ಷೇತ್ರದಲ್ಲಿ ನಾಶವಾಗುತ್ತದೆ. ಆದರೆ ತೀರ್ಥಕ್ಷೇತ್ರದಲ್ಲಿಯೇ ಮಾಡಿದ ಪಾಪವು ವಜ್ರಲೇಪವಾಗಿ ಪರಿಣಮಿಸುತ್ತದೆ. ಇತ್ತೀಚಿನ ದಿನಗಳಲ್ಲಿ ದೇವಸ್ಥಾನಗಳ ನಿರ್ಮಾಣವೇ ಭ್ರಷ್ಟ ಮಾರ್ಗಕ್ಕೆ ಕರೆದೊಯ್ಯುತ್ತಿರುವಾಗ ಅಂತಹ ದೇವಾಲಯ ಭಕ್ತರಿಗೆ ನಿಜವಾದ ಮುಕ್ತಿಮಾರ್ಗವನ್ನು ತೋರಲು ಸಾಧ್ಯವೇ? ಅದು ದೇವಾಲಯವಾಗದೆ ಪಾಪಕೂಪವಾಗುವುದಿಲ್ಲವೇ?

ಬಸವಣ್ಣನವರು ತಮ್ಮ ಒಂದು ವಚನದಲ್ಲಿ ಹೀಗೆ ಹೇಳುತ್ತಾರೆ: "ಮನೆಯೊಳಗೆ ಮನೆಯೊಡೆಯನಿದ್ದಾನೋ ಇಲ್ಲವೋ, ಹೊಸ್ತಿಲಲ್ಲಿ ಹುಲ್ಲುಹುಟ್ಟಿ, ಮನೆಯೊಳಗೆ ರಜ ತುಂಬಿ ಮನೆಯೊಳಗೆ ಮನೆಯೊಡೆಯನಿದ್ದಾನೋ ಇಲ್ಲವೋ!" ಮನೆಯ ಮುಂದೆ ಕಸ ಬಿದ್ದಿದ್ದರೆ, ಮನೆಯೊಳಗೆ ಧೂಳು ತುಂಬಿದ್ದರೆ, ಜೇಡರ ಬಲೆ ಆವರಿಸಿದ್ದರೆ, ಆ ಮನೆಯಲ್ಲಿ ಯಾರೂ ವಾಸವಾಗಿರುವಂತೆ ತೋರುವುದಿಲ್ಲ ಎಂದು ನೋಡಿದವರು ಸಂದೇಹ ವ್ಯಕ್ತಪಡಿಸುತ್ತಾರೆ. ಅದೊಂದು ಭೂತಬಂಗಲೆ ಇರಬೇಕೆಂದು ಇನ್ನು ಕೆಲವರು ಭಯಪಡುತ್ತಾರೆ. ಹಾಗೆಯೇ 'ತನುವಿನೊಳಗೆ ಹುಸಿ ತುಂಬಿ, ಮನದೊಳಗೆ ವಿಷಯ ತುಂಬಿ ಮನೆಯೊಳಗೆ ಮನೆಯೊಡೆಯನಿಲ್ಲಾ ಕೂಡಲಸಂಗಮ ದೇವಾ' ಅಂದರೆ ಮನುಷ್ಯ ತನ್ನೊಳಗೆ ಕಾಮಕ್ರೋಧಾದಿ ವಿಷಯವಾಸನೆಗಳನ್ನು ತುಂಬಿಕೊಂಡರೆ, ದುರ್ಗುಣಗಳ ದಾಸನಾದರೆ ಈ ಶರೀರವೂ ಸಹ ಒಂದು 'ಭೂತಬಂಗಲೆ'ಯಾಗುತ್ತದೆ. ಪವಿತ್ರಾತ್ಮ ವಾಸವಾಗಿರುವ ಮನೆಯಾಗುವುದಿಲ್ಲ. ಬಸವಣ್ಣನವರ ಈ ವಚನವನ್ನು ವಿಸ್ತರಿಸಿ ಹೀಗೆ ಹೇಳಬಹುದೆಂದು ತೋರುತ್ತದೆ:

**ಗುಡಿಯೊಳಗೆ ಗುಡಿಯೊಡೆಯನಿದ್ದಾನೋ ಇಲ್ಲವೋ**
**ಬಾಗಿಲಿಗೆ ಬೀಗ ಜಡಿದು**
**ಗಾಳಿಬೆಳಕಿಲ್ಲದ ಕೋಣೆಯೊಳಗೆ**
**ಹೋಮ-ಹವನಗಳ ಹೊಗೆಯೊಳಗೆ**
**ಉಸಿರುಕಟ್ಟಿ ನರಳುವಂತಾಗೆ**
**ಗುಡಿಯೊಳಗೆ ಗುಡಿಯೊಡೆಯನಿದ್ದಾನೋ ಇಲ್ಲವೋ**

**ಗುಡಿಯ ಕಟ್ಟಲು ತಂದ ಇಟ್ಟಿಗೆ,**
**ಮರಳು, ಕಬ್ಬಿಣ, ಜಲ್ಲಿಕಲ್ಲು,**
**ಸಿಮೆಂಟು, ಮರಮುಟ್ಟು ಎಲ್ಲವು**
**ಚುನಾವಣೆಗೆ ನಿಂತವರಿಂದ ಬಂದಿರಲು**
**ಅಂದಚೆಂದದ ಗುಡಿಯು ನಿಂತು ನಗುತಲಿದೆ**
**ಕಪ್ಪುಹಣ ತಕಥೈಯ ಕುಣಿಯುತಿದೆ!**
**ಕಾಳಸಂತೆಯ ನೀರಾಂಜನ ಬೆಳಗುತಿದೆ!**
**ಮೋಸ-ವಂಚನೆಗಳ ಕೊಂಬುಕಹಳೆ ಮೊಳಗುತಿದೆ!**
**ಕಳ್ಳಭಕ್ತರ ಗಂಟೆಜಾಗಟೆ ಅಬ್ಬರಿಸುತಿವೆ!**
**ಗುಡಿಯೊಳಗೆ ಗುಡಿಯೊಡೆಯನಿಲ್ಲಾ ಮತದಾರಪ್ರಭುವೇ!**

**18.4.2013**

**ಶ್ರೀ ತರಳಬಾಳು ಜಗದ್ಗುರು**
**ಡಾ॥ ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳವರು**
**ಸಿರಿಗೆರೆ**

❑